ದಿಃ **18.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ. ವಿ.ಜಿ.ವಾಯ್ ವಕೀಲರಿಂದಃ **1** ಮತ್ತು **2** ನೇ ಪ್ರತಿವಾದಿಯ ಪರವಾಗಿಃ

**8)** ನಾನು ಹತ್ತನೇಯ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿದ್ದೇನೆ. ದಾವಾ ಶೆಡ್ಯೂಲ್ ಎ ಆಸ್ತಿಗಳನ್ನು ನಾನು ನೋಡಿರುತ್ತೇನೆ, ದಾವಾ ಆಸ್ತಿಗಳ ಎಲ್ಲ ಚೆಕ್ಕಬಂದಿಗಳನ್ನು ನನಗೆ ಹೇಳಲು ಬರುವದಿಲ್ಲ. ನನ್ನ ಮದುವೆಯು 1989 ನೇ ಇಸ್ವಿಯಲ್ಲಿ ಆಗಿರುತ್ತದೆ. ನನ್ನ ಮದುವೆಯು ನನ್ನ ಗಂಡನ ಊರಾದ ಉದ್ರಿ ದೇವಸ್ಥಾನದಲ್ಲಿ ಆಗಿರುತ್ತದೆ. ಸದರಿ ಉದ್ರಿ ಗ್ರಾಮ ಸೊರಬ ತಾಲೂಕು ಶಿವಮೊಗ್ಗ ಜಿಲ್ಲೆಯಲ್ಲಿ ಬರುತ್ತದೆ. ನನ್ನ ಮದುವೆಯನ್ನು ನನ್ನ ತಂದೆ ತಾಯಿಗಳು ಕೊಟ್ಟಿರುತ್ತಾರೆ. ನನ್ನ ಗಂಡ ನನ್ನ ಅತ್ತೆಯ ಮಗನಾಗಿದ್ದರಿಂದ ನನ್ನ ಮದುವೆಯ ಸಂದರ್ಭದಲ್ಲಿ ನನಗೆ ಯಾವುದೇ ರೀತಿ ಹಣ ಅಥವಾ ಬಂಗಾರ ಕೊಟ್ಟು ಮದುವೆ ಮಾಡಿರುವದಿಲ್ಲ. ಅದೇ ರೀತಿ ನನ್ನ ಗಂಡನಿಗೂ ಸಹ ಯಾವುದೇ ವರೋಪಚಾರವನ್ನು ಕೊಟ್ಟಿರುವದಿಲ್ಲ. ನಮ್ಮ ತಂದೆ ತಾಯಿ ನನ್ನ ಮದುವೆಯಲ್ಲಿ ನನಗೆ ಸಾಕಷುಟ ಹಣ ಖರ್ಚು ಮಾಡಿ ಮತ್ತು ನನಗೆ ಬಂಗಾರ ಕೊಟ್ಟು ಮದುವೆ ಮಾಡಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ನಾನು ಈ ದಾವೆಯನ್ನು ಆಸ್ತಿಗಳಲ್ಲಿ ಪಾಲು ಕೇಳಿದ ಕಾರಣ ಮಾಡಿದ್ದರಿಂದ ನನ್ನ ತಂದೆ ತಾಯಿ ಮದುವೆ ಕಾಲದಲ್ಲಿ ಹಣ ಮತ್ತು ಬಂಗಾರ ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**9)** ಮಲ್ಲಿಕಾರ್ಜುನ ನನ್ನ ತಮ್ಮನಾಗಬೇಕು. ನನ್ನ ತಮ್ಮನಾದ ಮಲ್ಲಿಕಾರ್ಜುನ ಯಾವ ಇಸ್ವಿ ಮತ್ತು ತಿಂಗಳು ಮೃತಪಟ್ಟಿದ್ದಾನೆ ಎಂದು ನನಗೆ ಗೊತ್ತಿಲ್ಲ. ಆದರೆ ಮಲ್ಲಿಕಾರ್ಜುನ ದಿನಾಂಕಃ 22.11.2018 ರಲ್ಲಿ ಮೃತಪಟ್ಟಿದ್ದಾನೆ ಅಂದರೆ ಇರಬಹುದು. ನನ್ನ ತಮ್ಮ ಮಲ್ಲಿಕಾರ್ಜುನ ಇವರ

ಮದುವೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ಹೇಳಲು ಬರುವದಿಲ್ಲ. ಮಲ್ಲಿಕಾರ್ಜುನ ನನ್ನ ಸಹೋದರನ ಮದುವೆಯು ದಿನಾಂಕಃ 05.04.1996 ರಲ್ಲಿ 1 ನೇ ಪ್ರತಿವಾದಿ ಶ್ರೀಮತಿ ಶಶಿಕಲಾ ಈಕೆಯ ಜೊತೆಗೆ ಆಗಿರುತ್ತದೆ ಅಂದರೆ ಸರಿ. ಸದರಿ 1 ನೇ ಪ್ರತಿವಾದಿ ಶಶಿಕಲಾ ಮತ್ತು ಮಲ್ಲಿಕಾರ್ಜುನ ಈತನ ಮಗ 2 ನೇ ಪ್ರತಿವಾದಿ ಮನೋಜ ಇರುತ್ತಾನೆ ಅಂದರೆ ನನಗೆ ಗೊತ್ತಿರುವದಿಲ್ಲ.

**10)** ನಾನು ಈ ದಾವೆಯನ್ನು ದಾಖಲುಪಡಿಸುವ ಸಂದರ್ಭದಲ್ಲಿ 2 ನೇ ಪ್ರತಿವಾದಿ ಮನೋಜ ಈತನು 1 ನೇ ಪ್ರತಿವಾದಿ ಶಶಿಕಲಾ ಮತ್ತು ನನ್ನ ಸಹೋದರನಾದ ಮಲ್ಲಿಕಾರ್ಜುನ ಇವರಿಬ್ಬರ ಮಗ ಎಂದು ಹೇಳಿ ಬರೆಯಿಸಿರುತ್ತೇನೆ ಅಂದರೆ ಸರಿ. ನನ್ನ ತಂದೆ ಚೆನ್ನಬಸಪ್ಪ ಈಗ ಮೃತಪಟ್ಟಿದ್ದಾರೆ. ನಮ್ಮ ಕುಟುಂಬದ ಆಸ್ತಿಗಳಲ್ಲಿ ನನ್ನ ತಂದೆಯಾದಂತಹ ಚನ್ನಬಸಪ್ಪ ಮತ್ತು ನನ್ನ ಸಹೋದರನಾದಂತಹ ಮಲ್ಲಿಕಾರ್ಜುನ ಹಾಗೂ ಇನ್ನೊಬ್ಬ ಸಹೋದರನಾದ 3 ನೇ ಪ್ರತಿವಾದಿ ಬಾಬು ಎಲ್ಲರ ಮಧ್ಯ ದಿನಾಂಕಃ 19.03.2005 ನೇ ಇಸ್ವಿಯಂದು ನೊಂದಾಯಿತ ಪಾಲು ವಾಟ್ನಿ ಪತ್ರ ಆಗಿರುತ್ತದೆ ಅಂದರೆ ನನಗೆ ಗೊತ್ತಿರುವದಿಲ್ಲ.

**11)** ಸದರಿ ಪಾಲು ವಾಟ್ನಿ ಪತ್ರದ ಪ್ರಕಾರ ನನ್ನ ಸಹೋದರನಾದ ಮಲ್ಲಿಕಾರ್ಜುನ ಈತನಿಗೆ ದಾವಾ ಆಸ್ತಿಯಾದ 310/1 ಇದರಲ್ಲಿ 04 ಎಕರೆ 25 ಗುಂಟೆಯಷ್ಟು ಜಮೀನಿನಲ್ಲಿ ಸದರಿ ಮಲ್ಲಿಕಾರ್ಜುನ ನನ್ನ ಸಹೋದರನಿಗೆ 03 ಎಕರೆ 39 ಗುಂಟೆಯಷ್ಟು ಪಾಲು ಜಮೀನು ಬಂದಿರುತ್ತದೆ , ಉಳಿಕೆಯ 26 ಗುಂಟೆ ಭಾಗದ ಜಮೀನು 3 ನೇ ಪ್ರತಿವಾದಿ ನನ್ನ ಸಹೋದರ ಬಾಬು ಇವರಿಗೆ ಬಂದಿರುತ್ತದೆ ಅಂದರೆ ಸರಿ. 1 ನೇ ಪ್ರತಿವಾದಿ ಶಶಿಕಲಾ ಇವರು ಸೊರಬ ತಾಲೂಕಿನ ಕವಡಿ ಗ್ರಾಮದವರಾಗಿರುತ್ತಾರೆ ಅಂದರೆ ಸರಿ. 1996 ನೇ ಇಸ್ವಿಯಲ್ಲಿ 1 ನೇ ಪ್ರತಿವಾದಿ ಶಶಿಕಲಾ ಮತ್ತು ನನ್ನ ಸಹೋದರ ಮಲ್ಲಿಕಾರ್ಜುನ ಇವರ ವೈವಾಹಿಕ ಜೀವನದಲ್ಲಿ ಸ್ವಲ್ಪ ತಂಟೆ ತಕರಾರು ಬಂದಿರುತ್ತದೆ ಎನ್ನುವದು ನನಗೆ ಗೊತ್ತಿರುವದಿಲ್ಲ. ಆ ಒಂದು ಕಾರಣದಿಂದ 1 ನೇ ಪ್ರತಿವಾದಿ ಶಶಿಕಲಾ ಮತ್ತು 2 ನೇ ಪ್ರತಿವಾದಿ ಮನೋಜ ಇವರನ್ನು ನಮ್ಮ ಒಟ್ಟು ಕುಟುಂಬದ ಮನೆಯಿಂದ ಹೊರಗಡೆ ಹಾಕಿದ ನಂತರ ಈಕೆ

ಸೊರಬ ತಾಲೂಕಿನ ಕವಡಿ ಗ್ರಾಮದಲ್ಲಿ ವಾಸ ಮಾಡಿಕೊಂಡು ಬಂದಿರುತ್ತಾಳೆ ಎಂದರೆ ನನಗೆ ಗೊತ್ತಿರುವದಿಲ್ಲ.

**12)** ನಂತರ 1 ನೇ ಪ್ರತಿವಾದಿ ಶಶಿಕಲಾ ಈಕೆ ಸೊರಬ ನ್ಯಾಯಾಲಯದಲ್ಲಿ ಕ್ರಿಮಿನಲ್ ಮಿಸಲೇನಿಯಸ್ ನಂಬರಃ 72/2005 ಈ ಪ್ರಕರಣವನ್ನು ನನ್ನ ಸಹೋದರನಾದ ಮಲ್ಲಿಕಾರ್ಜುನ ಈತನ ವಿರುದ್ಧ ದಾಖಲುಪಡಿಸಿ ಅದರಲ್ಲಿ ತನಗೆ ಮತ್ತು ತನ್ನ ಮಗನಾದ ಮನೋಜ ಆ ಸಮಯದಲ್ಲಿ ಮನೋಜ ಅಲ್ಪವಯಿ ಇದ್ದು, ಮಲ್ಲಿಕಾರ್ಜುನ ಈತನು ಜೀವನಾಂಶ ನಡೆಸಲು ಪರಿಹಾರ ಕೊಡಬೇಕು ಎಂದು ದಾಖಲುಪಡಿಸಿದ್ದಳು ಅಂದರೆ ಸರಿಯಲ್ಲ. ಆ ರೀತಿ ಮಲ್ಲಿಕಾರ್ಜುನ ಈತನು ಸದರಿ ಕವಡಿ ಗ್ರಾಮ ಸೊರಬ ತಾಲೂಕಿನ ವಕೀಲರ ಕಛೇರಿಯಲ್ಲಿ ಸದರಿ ಕವಡಿ ಗ್ರಾಮದಲ್ಲಿನ ಹಿರಿಯರನ್ನು ಕೂಡಿಸಿ ಅವರಿಬ್ಬರ ಮದುವೆಯಲ್ಲಿ ಆದ ತಂಟೆ ತಕರಾರರನ್ನು ಬಗೆಹರಿಸುವ ಕುರಿತಾಗಿ ರಾಜಿ ಪಂಚಾಯತಿ ಮಾಡಿದ್ದರು ಎನ್ನುವ ವಿಷಯ ನನಗೆ ಗೊತ್ತಿದ್ದರೂ ಸಹ ಆ ವಿಷಯವನ್ನು ನಾನು ಗೊತ್ತಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**13)** ಆ ಒಂದು ರಾಜಿ ಪಂಚಾಯತಿಯಲ್ಲಿ ಆದ ತೀರ್ಮಾನದಂತೆ 1 ನೇ ಪ್ರತಿವಾದಿ ಮತ್ತು 2 ನೇ ಪ್ರತಿವಾದಿ ದಾಖಲುಪಡಿಸಿದ ಕ್ರಿ.ಮಿಸಲೇನಿಯಸ್ ನಂಬರಃ 72/2005 ಈ ಪ್ರಕರಣವನ್ನು ಹಿಂದೆ ತೆಗೆದುಕೊಳ್ಳಬೇಕು ಎಂದು ರಾಜಿಪತ್ರದ ಒಂದು ನಿಬಂಧನೆ ಎಂದು ತೀರ್ಮಾನ ಆಗಿತ್ತು ಅಂದರೆ ನನಗೆ ಗೊತ್ತಿರುವದಿಲ್ಲ. ಅದೇ ರೀತಿ ನನ್ನ ಸಹೋದರನಾದ ಮಲ್ಲಿಕಾರ್ಜುನ ಮತ್ತು ಶಶಿಕಲಾ ಇವರಿಬ್ಬರ ನಡುವೆ ಆದಂತಹ ವಿವಾಹ ವಿಚ್ಛೇದನ ಕುರಿತಾಗಿ ಸೊರಬ ಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ವಿಚ್ಛೇದನಕ್ಕಾಗಿ ಪರಕರಣವನ್ನು ದಾಖಲಿಸಿದ್ದು, ಅ ಪ್ರಕರಣದಲ್ಲಿ ಅವರಿಬ್ಬರ ಮದುವೆಯು ವಿಚ್ಛೇದನ ಆಗಬೇಕೆಂದು ರಾಜಿ ಪತ್ರದ ಪ್ರಕಾರ ಒಪ್ಪಂದ ಆಗಿತ್ತು ಅಂದರೆ ನನಗೆ ಮಾಹಿತಿ ಇರುವದಿಲ್ಲ.

**14)** ಸದರಿ ರಾಜಿ ಒಪ್ಪಂದದಲ್ಲಿ ಹಾವೇರಿಯ ಜಮೀನಿನ ಸರ್ವೆ ನಂಬರಃ 310/1 ಈ ಅಸ್ತಿಯಲ್ಲಿ ನನ್ನ ಸಹೋದರನಾದ ಮಲ್ಲಿಕಾರ್ಜುನ ಈತನಿಗೆ 03 ಎಕರೆ 39 ಗುಂಟೆಯಷ್ಟು ಜಮೀನು ಮತ್ತು 2 ನೇ ಪ್ರತಿವಾದಿಯಾದಂತಹ ಮನೋಜ ಈತನಿಗೆ 25 ಗುಂಟೆ ಜಮೀನು ಹಾಗೂ 1 ನೇ ಪ್ರತಿವಾದಿ ಶಶಿಕಲಾ ಈಕೆಗೆ 20 ಗುಂಟೆ ಆಸ್ತಿ ಹೋಗಬೇಕು ಎಂದು ರಾಜಿಪತ್ರದ 3 ನೇ ನಿಬಂಧನೆ ಪ್ರಕಾರ ಒಪ್ಪಂದ ಆಗಿತ್ತು ಅಂದರೆ ನನಗೆ ಮಾಹಿತಿ ಇರುವದಿಲ್ಲ. ಆ ರೀತಿ ರಾಜಿ ಪಂಚಾಯತಿಯಲ್ಲಿ ಆದಂತಹ ರಾಜಿ ಪ್ರಕಾರ 1 ನೇ ಪ್ರತಿವಾದಿ ಶಶಿಕಲಾ ಈಕೆಗೆ 20 ಗುಂಟೆ ಮತ್ತು 2 ನೇ ಪ್ರತಿವಾದಿ ಮನೋಜ 25 ಗುಂಟೆಯಷ್ಟು ಜಮೀನು ಹೋಗಿದ್ದರಿಂದ ಮುಂದೆ ಸದರಿ ಶಶಿಕಲಾ ಈಕೆ ಪಾಲು ವಾಟ್ನಿನ ಕುರಿತಾಗಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಬಾರದು ಎಂದು ರಾಜಿ ಪತ್ರದಲ್ಲಿ ನಿಬಂಧನೆ ಇತ್ತು ಅಂದರೆ ಸರಿ.ಸದರಿ ಒಪ್ಪಂದ ಪತ್ರಕ್ಕೆ ನಾನು ಕೂಡ ಸಹಿ ಮಾಡಿರುತ್ತೇನೆ ಅಂದರೆ ಸರಿ.

**15)** ಅದೇ ರೀತಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿ ಶಶಿಕಲಾ ಮತ್ತು 2 ನೇ ಪ್ರತಿವಾದಿ ಮನೋಜ ಈತನಿಗೆ ಬಂದಂತಹ 25 ಗುಂಟೆ ಜಮೀನಿನ ಕುರಿತಾಗಿ ಪಾಲುವಾಟ್ನಿ ದಾವೆ ಮಾಡಿದ್ದರು ಅಂದರೆ ಆ ಬಗ್ಗ ನನಗೆ ಗೊತ್ತಿರುವದಿಲ್ಲ. ಆ ರೀತಿ ಸದರಿ ಸಿವಿಲ್ ಪ್ರಕರಣದಲ್ಲಿ 1 ನೇ ಪ್ರತಿವಾದಿ ಶಶಿಕಲಾ, 2 ನೇ ಪ್ರತಿವಾದಿ ಮನೋಜ ಮತ್ತು ನನ್ನ ಸಹೋದರ ಮಲ್ಲಿಕಾರ್ಜುನ ರಾಜಿ ಮಾಡಿಕೊಂಡಿದ್ದರಿಂದ 1 ನೇ ಪ್ರತಿವಾದಿ ಶಶಿಕಲಾ 20 ಗುಂಟೆ, 2 ನೇ ಪ್ರತಿವಾದಿ ಮನೋಜ 25 ಗುಂಟೆ, ಅದೇ ರೀತಿ ಮಲ್ಲಿಕಾರ್ಜುನ ಈತನಿಗೆ 02 ಎಕರೆ 34 ಗುಂಟೆ ಜಮೀನು ಬಂದಿರುತ್ತದೆ ಅಂದರೆ ನನಗೆ ಗೊತ್ತಿರುವದಿಲ್ಲ. ಅದೇ ರೀತಿ ಶಶಿಕಲಾ ಈಕೆ ಆತನ ಗಂಡನ ಮಲ್ಲಿಕಾರ್ಜುನ ವಿರುದ್ದ ಸೊರಬದ ಹಿರಿಯ ನ್ಯಾಯಾದೀಶರ ನ್ಯಾಯಾಲಯದಲ್ಲಿ ಒಪ್ಪಂದದ ಪ್ರಕಾರ ಅರ್ಜಿಯನ್ನು ಸಲ್ಲಿಸಿ ಸದರಿ ಅರ್ಜಿಯು ದಿನಾಂಕಃ 11.12.2003 ರ

ಆದೇಶದ ಪ್ರಕಾರ ಆದೇಶ ಆಗಿರುತ್ತದೆ ಅಂದರೆ ನನಗೆ ಮಾಹಿತಿ ಇರುವದಿಲ್ಲ. ಅದೇ ರೀತಿ ಮಲ್ಲಿಕಾರ್ಜುನ ಮತ್ತು ಮನೋಜ ಈತನಿಗೆ ದಾವಾ ಶೆಡ್ಯೂಲ್ ಎ 3 ಮತ್ತು 4 ಎರಡು ಆಸ್ತಿಗಳು ಅವರ ಜೀವನಾಂಶಕ್ಕಾಗಿ ಕೊಡಲ್ಪಟ್ಟಿತ್ತು ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಎ ಕ್ರಮ ಸಂಖ್ಯೆಃ 3 ಮತ್ತು 4 ಆಸ್ತಿಗಳು ಇವು ನಮ್ಮ ಒಟ್ಟು ಕುಟುಂಬದ ಆಸ್ತಿಗಳು ಆಗಿರುವದಿಲ್ಲ ಅಂದರೆ ಸರಿಯಲ್ಲ. ಎರಡೂ ಆಸ್ತಿಗಳಿಗೂ ಮತ್ತು ನನಗೂ ಯಾವುದೇ ರೀತಿ ಸಂಬಂದ ಇಲ್ಲ ಅಂದರೆ ಸರಿಯಲ್ಲ. ಮತ್ತು ಮೇಲೆ ಹೇಳಿದ ಎರಡೂ ಆಸ್ತಿಗಳಲ್ಲಿ ನನಗೆ ಹಿತಾಸಕ್ತಿ ಮತ್ತು ನನಗೆ ಪಾಲು ಕೇಳಲು ಬರುವದಿಲ್ಲ ಅಂದರೆ ಸರಿಯಲ್ಲ. ನಾನು ಸುಳ್ಳು ಸಂಗತಿಗಳನ್ನು ನನ್ನ ವಾದ ಪತರದಲ್ಲಿ ಬರೆಯಿಸಿ 1 ಮತ್ತು 2 ನೇ ಪ್ರತಿವಾದಿಯರು ವಿರುದ್ದ ಸುಳ್ಳು ಪಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ.ಪಿ.ಆರ್.ಎಂ ವಕೀಲರಿಂದಃ ಪಾಟೀ ಸವಾಲಿಗೆ ಸಮಯಾವಕಾಶ ಕೇಳಲಾಗಿ ಅವಕಾಶ ನೀಡಲಾಯಿತು.</u>

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ, ಹಾವೇರಿ.